ಹೈಕೋರ್ಟ್ ಮುಂದೆ ರೌಂಡ್ ಹಾಕಿಸಿ, ಮೆಟ್ರೊ ರೈಲು ಭೂಮಿ ಒಳಗೆ ಹೋಗಿರುವುದನ್ನು ಹೇಳಿ ಮೇಷ್ಟ್ರನ್ನು ಆಶ್ಚರ್ಯಪಡಿಸಿದ್ದನು. ''ಮಳೆಗಾಲ, ಬೇಗ ಊರು ಸೇರ್ಕಂಬ್ತೀವಿ ಸಾ.'' ಎಂದು ಆತುರ ತೋರಿಸಿದ್ದ ಲೇಪಾಕ್ಷಿ. ಹೆಂಡತಿಯೂ ಅದಕ್ಕೆ ಧ್ವನಿಗೂಡಿಸಿದ್ದಳು. ಪಂಚಾಲಯ್ಯ ತನ್ನ ಆಫೀಸ್ ಮುಂದೆ ಇಳಿದುಕೊಂಡ. ಮೇಷ್ಟ್ರ ಸೊಸೆ ಪಂಚಾಲಯ್ಯನನ್ನು ಕುರಿತು, ''ಊರಿಗೆ ಯಾವಾಗಾದ್ರೂ ಬಂದ್ರೆ ನಮ್ಮೂರಿಗೆ ಬನ್ರಣ್ಣೊ, ಒಬ್ಬಟ್ಟು ಮಾಡ್ತೀನಿ.'' ಎಂದು ಎದೆಯಾಳದಿಂದ ಕೃತಜ್ಞತೆಯನ್ನು ಹೊರಚೆಲ್ಲಿದ್ದಳು. ಕಾರು ಹೊರಟಿತು. ಪಂಚಾಲಯ್ಯ ಮೂವರಿಗೂ ಟಾಟ ಮಾಡಿ ಆಫೀಸು ಪ್ರವೇಶ ಮಾಡಿದ್ದ.

ಆವೊತ್ತು ಲಂಚ್ ಟೈಮ್ ಮುಗಿಯುತ್ತಿದ್ದಂತೆ ಕಾಣಿಕ್ಯರಾಜು ಮೇಷ್ಟ್ರು ಮಹದೇವಪ್ಪನವರ ಸ್ಟೇಟ್ಮೆಂಟನ್ನು ಪಂಚಾಲಯ್ಯನ ಪೆನ್ಷನ್ ಫೈಲಿಗೆ ಸೇರಿಸಿ, ವಿವರವಾದ ಟಿಪ್ಪಣಿ ಬರೆದು ಅಡಿಷನಲ್ ಕಮಿಷನರ್ ರಾಜೇಂದ್ರ ಪ್ರಸಾದರ ಸಹಿಯನ್ನು ಹಾಕಿಸಿಕೊಂಡು ಕಮಿಷನರ್ ಪಿ.ಎ. ಹತ್ತಿರ ಕೊಟ್ಟಿದ್ದ. ಪಿ.ಎ. ಒಂದೇ ನಿಮಿಷದಲ್ಲಿ ಕಮಿಷನರ್ ಚೆಂಬರಿಗೆ ಹೋಗಿ ಸಹಿಯನ್ನು ಹಾಕಿಸಿಕೊಂಡು ಬಂದು ಕಾಣಿಕ್ಯರಾಜು ಕೈಗೆ ಕೊಟ್ಟಿದ್ದ. ಬದಲಾಗಿ ಕಾಣಿಕ್ಯರಾಜು ಪಿ.ಎ. ಬೇಡಬೇಡವೆಂದರೂ ಜೇಬಿಗೆ ಐನೂರು ರೂಪಾಯಿಯ ನೋಟನ್ನು ತುರುಕಿ ತನ್ನ ಸೀಟಿನ ಕಡೆ ನಡೆದ. ಪಂಚಾಲಯ್ಯ, ದೇವೇಗೌಡ ಇಬ್ಬರೂ ಅಲ್ಲೇ ಕಾಯುತ್ತಾ ನಿಂತಿದ್ದರು. ಕಾಣಿಕ್ಯರಾಜು ಅವರನ್ನು ದೂರದಿಂದಲೇ ನೋಡಿ ಎರಡು ಬೆರಳುಗಳನ್ನು V ಆಕಾರದಲ್ಲಿ ತೋರಿಸಿದ್ದ. ಅಂತೂ ನಿವೃತ್ತಿಯ ದಿನವೇ ಪಂಚಾಲಯ್ಯನ ಪೆನ್ಷನ್ ಫಿಕ್ಸ್ ಆಗುವುದರೊಂದಿಗೆ ಗ್ರೂಪ್ ಇನ್ಶೂರೆನ್ಸ್, ಲೀವ್ ಎನ್ ಕ್ಯಾಶ್ಮೆಂಟ್ ಇತ್ಯಾದಿ ಅದೂ ಇದೂ ಉಳಿತಾಯದ ಬಾಬ್ತುಗಳಿಂದ ಮೂವತ್ತು ಲಕ್ಷ ರೂಪಾಯಿಗಳ ಚೆಕ್ ಬಂದಿತ್ತು. ಆವೊತ್ತು ರಾತ್ರಿ ಪಂಚಾಲಯ್ಯನ ಕೆಲವು ಆಪ್ತ ಸ್ನೇಹಿತರು ಮಲ್ಲೇಶ್ವರ ಕ್ಲಬ್‌ನಲ್ಲಿ ಬೀಳ್ಕೊಡುಗೆ ಪಾರ್ಟಿಯನ್ನು ಇಟ್ಟುಕೊಂಡಿದ್ದರು. ಪಂಚಾಲಯ್ಯ ಗ್ಲಾಸಿಗೆ ಬಗ್ಗಿಸಿದ್ದ ಕಿಂಗ್ ಫಿಶರ್ ಬಿಯರನ್ನು ಕಾಲು ಗ್ಲಾಸು ಎತ್ತಿ ಗ್ಲಾಸನ್ನು ಟೇಬಲ್ ಮೇಲೆ ಇಟ್ಟಿದ್ದ. ಅಷ್ಟರಲ್ಲಿ ಮೊಬೈಲ್ ರಿಂಗಾಗಿತ್ತು. ನೋಡಿದರೆ, ಮೇಷ್ಟ್ರು ಮಗ ಲೇಪಾಕ್ಷಿಯ ನಂಬರ್ರು ಸ್ಕ್ರೀನ್ ಮೇಲೆ ತೇಲಾಡುತ್ತಿತ್ತು. ಫೋನ್ ರಿಸೀವ್ ಮಾಡಿಕೊಂಡು ಹಲೋ ಎಂದಿದ್ದ. ಆ ಕಡೆಯಿಂದ ಲೇಪಾಕ್ಷಿ. ''ಸಾರ್ ಕಾಲು ಗಂಟೆಯ ಹಿಂದೆ ನಮ್ಮಪ್ಪ ಹೋಗ್ಬಿಟ್ರು. ಈ ಇಪ್ಪತ್ತು ದಿನಗಳಿಂದ್ಲೂ ತುಂಬಾ ಕೆಮ್ತಿದ್ರು. ಮೊನ್ನೆಯಿಂದ ಜ್ವರ ಬೇರೆ ಕಾಣಿಸಿಕೊಂಡಿತ್ತು. ದಫನ್ ನಾಳೆ ಇಟ್ಕೊಂಡಿದ್ದೀವಿ. ಯಂಗಾದ್ರಾಗ್ಲಿ ಅಂತ ನಿಮಗೆ ಫೋನ್ ಮಾಡಿ ತಿಳಿಸ್ತಿದ್ದೀನಿ. ಮೊನ್ನೆ ಮೊನ್ನೆವರ್ಗೂ ನೀವು ಮಾಡಿದ ಸನ್ಮಾನನ ನೆನೆಸ್ಕೊಳ್ತಾನೆ ಇದ್ರು. ವಯಸ್ಸು ಆಗಿತ್ತು ಬಿಡ್ರಿ, ಹೋಗ್ಲಿ ಅತ್ತ.'' ಎಂದು ಫೋನ್ ಇಟ್ಟಿದ್ದ. ಪಂಚಾಲಯ್ಯನ ಕಣ್ಣುಗಳಿಂದ ನೀರು ಪುಳಕ್ಕನೆ ಜಾರಿ ಕೆನ್ನೆಯ ಮೇಲೆ ಹರಿದು ಬಿಯರ್ ಗ್ಲಾಸಿಗೂ ತೊಟ್ಟಿಕ್ಕಿತ್ತು.


### ಕೇಶವರೆಡ್ಡಿ ಹಂದ್ರಾಳ

ಕನ್ನಡದ ಪ್ರಸಿದ್ಧ ಮತ್ತು ಮಹತ್ವದ ಕತೆಗಾರ ಕೇಶವರೆಡ್ಡಿ ಹಂದ್ರಾಳ ಓದುಗರನ್ನು ದಶಕಗಳ ಕಾಲ ಹಿಡಿದಿಟ್ಟುಕೊಂಡ ಲೇಖಕ. 'ಹಂದ್ರಾಳ', 'ಅಂತಃಪುರ', 'ಬರದ ನಾಡಿನಲ್ಲಿ ಬೆಳದಿಂಗಳು', 'ಜಡೆಗೆ ಗುಲ್‌ಮೊಹರ್ ಕೈಗಳು', 'ಒಂದು ಹಿಡಿ ಮಣ್ಣು', 'ಬಾರಕ್ಕ ಬೆಳದಿಂಗಳೆ', 'ಈ ಕ್ಷಣದ ಬುದ್ಧ' ಅವರ ಕೆಲವು ಕಥಾಸಂಗ್ರಹಗಳು. 'ಒಕ್ಕಲ ಒನಪು', 'ಮರೆತ ಭಾರತ'– ಪ್ರಬಂಧ ಸಂಕಲನಗಳು. ಸಿನಿಮಾ, ಧಾರಾವಾಹಿಗಳಿಗೆ ಕತೆ, ಸಂಭಾಷಣೆ ಬರೆದಿದ್ದಾರೆ. 'ನನ್ನ ಕ್ರಾಂತಿಯ ಹುಡುಗಿ' ಅವರ ಕವನ ಸಂಗ್ರಹ.